**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರು:- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 551/2020**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿತರು ಃ ಮಲ್ಲಪ್ಪ ಮತ್ತು ಇತರರು.**

**ದೋಷಾರೋಪಣೆ**

ನಾನು, ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಯಾದಗಿರಿ, ಈ ಕೆಳಕಂಡ ಆರೋಪಿತರು.

| | |
|---|---|
| 1. | ಮಲ್ಲಪ್ಪ ತಂದೆ ಭೀಮಣ್ಣಾ ಅಚ್ಚಕೇರಿ, ವಃ 65 ವರ್ಷ,ಉಃ ಒಕ್ಕಲುತನ |
| 2. | ಭೀಮರಾಯ ತಂದೆ ಮಲ್ಲಪ್ಪ ಅಚ್ಚಕೇರಿ , ವಃ 35 ವರ್ಷ, ಉಃ ಒಕ್ಕಲುತನ, |
| 3. | ಮಲ್ಲಪ್ಪ ತಂದೆ ಮಲ್ಲಪ್ಪ ಅಚ್ಚಕೇರಿ, ವಃ 40 ವರ್ಷ, ಉಃ ಒಕ್ಕಲುತನ |
| 4. | ರಾಜು ತಂದೆ ಮಲ್ಲಪ್ಪ ಅಚ್ಚಕೇರಿ, ವಃ 28 ವರ್ಷ, ಉಃ ಒಕ್ಕಲುತನ |
| 5. | ಸಾಬಯ್ಯ ತಂದೆ ಮಲ್ಲಪ್ಪ ಅಚ್ಚಕೇರಿ, ವಃ 33 ವರ್ಷ, ಉಃ ಒಕ್ಕಲುತನ |
| 6. | ಮಹಾದೇವಮ್ಮ ಗಂಡ ಮಲ್ಲಪ್ಪ ಅಚ್ಚಕೇರಿ, ವಃ 60 ವರ್ಷ, ಉಃ ಮನೆ ಕೆಲಸ |
| 7. | ಮಲ್ಲಮ್ಮ ಗಂಡ ಮಲ್ಲಪ್ಪ ಅಚ್ಚಕೇರಿ, ವಃ 30 ವರ್ಷ, ಉಃ ಮನೆ ಕೆಲಸ |
| 8. | ಮಹಾದೇವಪ್ಪ ತಂದೆ ಆಶಪ್ಪ ಹಲಗಿ ವಃ 45 ವರ್ಷ, ಉಃ ಒಕ್ಕಲುತನ |
| 9. | ಭೀಮರಾಯ ತಂದೆ ಮಹಾದೇವಪ್ಪ ಹಲಗಿ ವಃ 21 ವರ್ಷ, ಉಃ ಒಕ್ಕಲುತನ |
| 10. | ಸಣ್ಣ ಮಲ್ಲಪ್ಪ ತಂದೆ ಆಶಪ್ಪ ಹಲಗಿ ವಃ 55 ವರ್ಷ, ಉಃ ಒಕ್ಕಲುತನ |
| 11. | ಮಲ್ಲಿಕಾರ್ಜುನ ತಂದೆ ಮಲ್ಲಪ್ಪ ಹಲಗಿ ವಃ 26 ವರ್ಷ, ಉಃ ಒಕ್ಕಲುತನ |
| 12. | ಬಂಗಾರೆಪ್ಪಾ ತಂದೆ ಬಂಗಾರೆಪ್ಪಾ ಅಚ್ಚಕೇರಿ ವಃ 30 ವರ್ಷ, ಉಃ ಒಕ್ಕಲುತನ |
| 13. | ಮಲ್ಲಪ್ಪ ತಂದೆ ಶರಣಪ್ಪ ದನಕಾಯೋರ, ವಃ 40 ವರ್ಷ, ಉಃ ಗೌಂಡಿ |
| 14. | ಸಂಗಮ್ಮ ಗಂಡ ಮಲ್ಲಪ್ಪ ದನಕಾಯೋರ, ವಃ 37 ವರ್ಷ, ಉಃ ಕೂಲಿ ಕೆಲಸ |
| | ಎಲ್ಲರೂ ಸಾಃ ರಾಮಸಮುದ್ರ ತಾಃ ಜಿಃ ಯಾದಗಿರಿ |

**ಆದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಎನೆಂದರೆ,**

ಮೊದಲನೆಯದಾಗಿ ಯಾದಗಿರಿ ತಾಲೂಕ ಪೈಕಿ ಯಾದಗಿರಿ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿರುವ ರಾಮಸಮುದ್ರ ಗ್ರಾಮದ ಬಳಿ, ದಿನಾಂಕಃ 03-09-2020 ರಂದು ಬೆಳಿಗ್ಗೆ 9-00 ಗಂಟೆ ಸುಮಾರಿಗೆ ಆರೋಪಿಗಳಾದ ನೀವೆಲ್ಲರೂ ಏಕೋದ್ದೇಶದಿಂದ ಚಾಸಾಃ 4 ರವರ ಜೊತೆಗೆ ಬಚ್ಚಲು ನೀರಿನ ವಿಷಯದಲ್ಲಿ ಜಗಳ ಮಾಡಿಕೊಂಡು ಆರೋಪಿಗಳಾದ ನೀವು ಚಾಸಾಃ 1, 4, 5 ಮತ್ತು 6 ಇವರು ಕುಪಿತರಾಗಿ ಸಾರ್ವಜನಿಕ ಶಾಂತಿ ಭಂಗವನ್ನುಂಟು ಮಾಡಲಿ ಎನ್ನುವ ಕಾರಣದಿಂದ ಅವರನ್ನು ಉದ್ದೇಶಪೂರ್ವಕವಾಗಿ "ಎಲೆ ಬೊಸಡಿ ಮಕ್ಕಳೇ" ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು ಆ ಮೂಲಕ ನೀವು ಭಾ.ದಂ.ಸ. 1860 ಕಲಂ 504 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

2. ಎರಡನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಗಳಾದ ನೀವೆಲ್ಲರೂ ಚಾಸಾಃ 4 ರವರ ಜೊತೆ ಜಗಳ ತೆಗೆದು ಚಾಸಾಃ 1, 4, 5 ಮತ್ತು 6 ರವರಿಗೆ ಅವಾಚ್ಯವಾಗಿ ಬೈದ ನಂತರ ಆರೋಪಿಗಳಾದ ನೀವೆಲ್ಲರೂ ಅಕ್ರಮಕೂಟ ಸೇರಿಕೊಂಡು ಹಕಾರಿ ಹೊಡೆಯುತ್ತಾ ಆರೋಪಿಗಳಾದ ನೀವೆಲ್ಲರೂ ಮಾರಕಾಯುಧವಾದ ಕಲ್ಲು, ಬಡಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಆರೋಪಿಗಳಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟದ ಸದಸ್ಯರಾಗಿದ್ದುಕೊಂಡು ದೊಂಬಿ ನಡೆಸುವ ಮೂಲಕ ಆರೋಪಿಗಳಾದ ನೀವೆಲ್ಲರೂ ಭಾ.ದಂ.ಸ. 1860 ಕಲಂ 143, 147, 148, ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

3. ಮೂರನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಗಳಾದ ನೀವೆಲ್ಲರೂ ಏಕೊದ್ದೇಶದಿಂದ ಅಕ್ರಮಕೂಟ ಸೇರಿಕೊಂಡು ದೊಂಬಿ ನಡೆಸುತ್ತಾ ಆರೋಪಿಗಳಾದ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಕೈಯಲ್ಲಿದ್ದ ಮಾರಕಾಯುಧವಾದ ಕಲ್ಲಿನಿಂದ ಚಾಸಾಃ 4 ರವರಿಗೆ ಎದೆಯ ಮೇಲೆ ಹೊಡೆದು ಗುಪ್ತಗಾಯ ಮಾಡಿರುವುದಲ್ಲದೆ, ನಿಮ್ಮ ಪೈಕಿ 2, 8, 12 ಮತ್ತು 15 ನೇ ಆರೋಪಿಗಳಾದ ನೀವೆಲ್ಲರೂ ಕೈಯಲ್ಲಿದ್ದ ಮಾರಕಾಯುಧವಾದ ಬಡಿಗೆಯಿಂದ ಚಾಸಾಃ 5 ರವರ ಎಡ ರಟ್ಟೆಗೆ, ಬೆನ್ನಿಗೆ, ಕಾಲಿಗೆ ಹೊಡೆದು ಗುಪ್ತಗಾಯ ಮಾಡುವ ಮೂಲಕ ಆರೋಪಿಗಳಾದ ನೀವೆಲ್ಲರೂ ಭಾ.ದಂ.ಸ. 1860 ಕಲಂ

324 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

4. ನಾಲ್ಕನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಗಳಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಸೇರಿಕೊಂಡು ದೊಂಬಿ ನಡೆಸುತ್ತಾ ಆರೋಪಿಗಳಾದ ನಿಮ್ಮ ಪೈಕಿ 4, 5, 10 ಮತ್ತು 11 ನೇ ಆರೋಪಿಗಳಾದ ನೀವು ಸ್ವ ಇಚ್ಛೆಯಿಂದ ಚಾಸಾಃ 6 ರವರಿಗೆ ನೆಲಕ್ಕೆ ಹಾಕಿ ಕೈ ಮುಷ್ಠಿ ಮಾಡಿ ಹೊಟ್ಟೆಗೆ, ಬೆನ್ನಿಗೆ ಹೊಡೆದು ನೆಲಕ್ಕೆ ಹಾಕಿ ಕಾಲಿನಿಂದ ಒದ್ದು ಗಾಯ ಮಾಡಿರುವುದಲ್ಲದೆ, ಉಳಿದ ಎಲ್ಲಾ ಆರೋಪಿತರು ಚಾಸಾಃ 4, 5 ಮತ್ತು 6 ರವರಿಗೆ ನೆಲಕ್ಕೆ ಹಾಕಿ ಒದ್ದು ಗಾಯ ಮಾಡಿರುವುದಲ್ಲದೆ, ಜಗಳ ಬಿಡಿಸಲು ಬಂದ ಚಾಸಾಃ 1 ರವರು ಹೋದಾಗ ಆರೋಪಿಗಳಾದ ನಿಮ್ಮ ಪೈಕಿ 6 ಮತ್ತು 7 ನೇ ಆರೋಪಿಗಳಾದ ನೀವು ಕೈಗಳಿಂದ ಹೊಡೆದು ನೋವು ಮಾಡುವುದರ ಮೂಲಕ ಆರೋಪಿಗಳಾದ ನೀವೆಲ್ಲರೂ ಭಾ.ದಂ.ಸ. 1860 ಕಲಂ 323 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

5. ಕೊನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಗಳಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಸೇರಿಕೊಂಡು ದೊಂಬಿ ನಡೆಸುತ್ತಾ ಆರೋಪಿಗಳಾದ ನೀವೆಲ್ಲರೂ ಚಾಸಾಃ 1, 4, 5 ಮತ್ತು 6 ರವರಿಗೆ ಇನ್ನೊಮ್ಮೆ ಸಿಗರಿ ಸೂಳೆ ಮಕ್ಕಳೇ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಮಾಡುವುದರ ಮೂಲಕ ಆರೋಪಿಗಳಾದ ನೀವೆಲ್ಲರೂ ಭಾ.ದಂ.ಸ. 1860 ಕಲಂ 506 ಸಹವಾಚಕ ಕಲಂ ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಅವರು ನೀಡಿದ ವಿವರಣೆಯನ್ನು ದಿನಾಂಕಃ 04-08-2022 ರಂದು ಯತಾಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ).

**(ಶ್ರೀ ರಾಹುಲ ಚಾಂಭಾರ )**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ .ದಂ. ಗಳು ಯಾದಗಿರಿ.**

**ದಿನಾಂಕಃ 04-08-2022**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 551/2020**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ ಪೊಲೀಸ್ ಠಾಣೆ**

**// ವಿರುದ್ದ //**

ಆರೋಪಿ ನಂ. 14 ಃ ಸಂಗಮ್ಮ ಗಂಡ ಮಲ್ಲಪ್ಪ ದನಕಾಯೋರ

ಪ್ರಶ್ನೆ-1ಃ ಈ ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರಶ್ನೆ-2ಃ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸುವಿರೋ?

ಉತ್ತರಃ

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಅವರು ನೀಡಿದ ವಿವರಣೆಯನ್ನು ದಿನಾಂಕಃ 04-08-2022 ರಂದು ಯತಾಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ).

**(ಶ್ರೀ ರಾಹುಲ ಚಾಂಭಾರ )**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ .ದಂ. ಗಳು ಯಾದಗಿರಿ.**

**ದಿನಾಂಕಃ 04-08-2022**
**ಸ್ಥಳಃ ಯಾದಗಿರಿ**